ಗುಂಡ ಹಾಲು ತರಲು ಅಂಗಡಿಗೆ ಹೋಗಿದ್ದ. ಅಲ್ಲಿ ಇದ್ದ ಬೋರ್ಡ್ ಮೇಲೆ 'ಎರಡು ಮಕ್ಕಳ ನಡುವೆ ಅಂತರವಿರಲಿ' ಎಂದು ಬರೆದಿದ್ದನ್ನು ಗಮನಿಸಿದ. ಅದರ ಕೆಳಗಡೆಯೇ ಮತ್ತೊಂದು ಹೊಸ ಬೋರ್ಡ್ ಇತ್ತು. ಅದರಲ್ಲಿ 'ಕೊರೊನಾ ನಿರ್ಮೂಲನೆಯಾಗುವವರೆಗೆ ಗಂಡ ಹೆಂಡತಿಯರ ನಡುವೆ ಅಂತರವಿರಲಿ' ಎಂದಿತ್ತು. ಅದನ್ನು ಓದಿದ ಗುಂಡ, 'ಕೊರೊನಾ ನಿರ್ಮೂಲನೆಯಾಗುವವರೆಗೆ ಮೊದಲ ಬೋರ್ಡ್‌ನ ತೆಗೆದು ಹಾಕಬಹುದಿತ್ತಲ್ಲಾ' ಅಂದುಕೊಂಡ.

ಮಂಕ: ಸರ್, ನಿಮ್ಮ ಮಗಳನ್ನು ಮದುವೆಯಾಗಲು ನೀವು ನನಗೆ ಒಪ್ಪಿಗೆ ಕೊಡಬೇಕು.
ತಂದೆ: ಆಯ್ತಪ್ಪಾ ನಾನು ಒಪ್ಗಿಗೆ ಕೊಡ್ತೀನಿ. ಆದರೆ ಅವಳನ್ನು ಮದುವೆಯಾಗಲು ನಿನಗೆ ಏನು ಅರ್ಹತೆ ಇದೆ?
ಮಂಕ: ಸರ್, ತಿಂಗಳಿಗೆ ನನಗೆ ಮೂವತ್ತೈದು ಸಾವಿರ ಸಂಬಳ ಬರುತ್ತೆ.
ಮಂಕ: ಅಷ್ಟೇನಾ, ನನ್ನ ಮಗಳ ಪಾಕೆಟ್ ಮನಿಗೇ ನಾನು ಮೂವತ್ತು ಸಾವಿರ ಕೊಡ್ತೀನಿ.
ಮಂಕ: ಅದನ್ನೂ ಸೇರಿಸಿಯೇ ಹೇಳಿದ್ದು.

ಗುಂಡನದ್ದು ಬೀದಿ ಬೀದಿ ತಿರುಗಾಟ ಮಾಡುವ ಕೆಲಸ. ಅದರಿಂದ ಬೆನ್ನು–ಕೈಕಾಲು ನೋವು ಅವನ ಬೆನ್ನು ಬಿದ್ದಿತ್ತು. ಅದಕ್ಕೆ ಅವನ ಹೆಂಡತಿ ಆಗಾಗ ಹೆಣ್ಣೆ ಹಚ್ಚಿ ಮಾಲೀಷು ಮಾಡುತ್ತಿದ್ದಳು. ಹಾಗೆಯೇ ಒಂದಿನ ಎಣ್ಣೆ ಬಟ್ಟಲು ತಂದಳು.
ಗುಂಡ: 'ಲೇ ಈ ಮನೆ ಮದ್ದೆಲ್ಲಾ ಬೇಡ ಕಣೆ'.
ಹೆಂಡತಿ: ಯಾಕ್ರೀ? ನೀವೇನು ಆಸ್ಪತ್ರೆಗೆ ಹೋಗಿ ಸಾವಿರಾರು ರೂಪಾಯಿ ಖರ್ಚು ಮಾಡಬೇಕು ಅಂತಿದ್ದೀರಾ?
ಗುಂಡ: ಅಲ್ಲ ಕಣೆ. ಕೊರೊನಾ ಶುರುವಾಗಿ ಮನೆಲೇ ಇರುವುದರಿಂದ ಯಾವ ನೋವೂ ಇಲ್ಲ. ಎಲ್ಲ ನೋವುಗಳಿಗೆಲ್ಲಾ ಮನೆಯೇ ಮದ್ದಾಗಿದೆ!

ಒಮ್ಮೆ ಜಿಲ್ಲಾ ಉಸ್ತುವಾರಿ ಸಚಿವರಿಂದ ನೇರ ಫೋನ್ ಇನ್ ಕಾರ್ಯಕ್ರಮ ಆಯೋಜನೆಯಾಗಿತ್ತು. ಬಿಪಿಎಲ್ ಕಾರ್ಡ್ ಹೊಂದಿದ್ದ ಗುಂಡ ಸಚಿವರಿಗೆ ಫೋನ್ ಮಾಡಿ, ನಮಸ್ಕಾರ್ ಸಾರ್. ಎರಡು ತಿಂಗಳ ಪಡಿತರವನ್ನು ಉಚಿತವಾಗಿ ಕೊಟ್ಟಿದ್ದಕ್ಕೆ ಧನ್ಯವಾದ ಅರ್ಪಿಸಿದ. ಅದಕ್ಕೆ ಖುಷಿಪಟ್ಟ ಸಚಿವರು ಮತ್ತೇನಾದರೂ ಮನವಿ ಇದೆಯೇ ಗುಂಡ ಎಂದು ಕೇಳಿದರು. ಅದಕ್ಕೆ ಗುಂಡ, 'ಹಾ ಸರ್ ಇದೆ. ಪಡಿತರ ಉಚಿತವಾಗಿ ಕೊಟ್ಟ ರೀತಿಯೇ ಬಿಪಿಎಲ್ ಕಾರ್ಡುದಾರರ ಮೊಬೈಲ್ ಸಂಖ್ಯೆಗೆ ಎರಡು ತಿಂಗಳ ವರೆಗೆ ಅನ್‌ಲಿಮಿಡೆಟ್ ಡಾಟಾ ಪ್ಯಾಕ್ ಅನ್ನು ರೀಚಾರ್ಜ್ ಮಾಡಿಸಿ' ಅಂದ. ಅಷ್ಟಕ್ಕೆ ಸಚಿವರು ಬೆಸ್ತುಬಿದ್ದರು!

ಮೇಷ್ಟು: ಮಕ್ಕಳೇ, ಕಣ್ಣಿಗೆ ಕಾಣದ ಸತ್ಯ ಎಲ್ಲಿ ಅಡಗಿದೆ, ಹೇಳಿ ನೋಡೋಣ.
ವಿದ್ಯಾರ್ಥಿಗಳು: ನೀವು ನಮಗೆ ಕೊಡುವ ಅಂಕ ಪಟ್ಟಿಯಲ್ಲಿದೆ ಸಾರ್!

ಶಿಕ್ಷಕ: ಭೀಮ, ಸರ್ಕಾರದ ಪರಿಹಾರಗಳು. ಇದಕ್ಕೆ ಒಂದು ಉದಾಹರಣೆ ಕೊಡು.
ಭೀಮ: ಕೊರೊನಾ ಸೋಂಕಿನಿಂದ ನೀವು ಸತ್ತಾಗ, ನಿಮ್ಮ ಕುಟುಂಬಕ್ಕೆ ಸರ್ಕಾರ ₹ 1 ಲಕ್ಷ ಪರಿಹಾರ ಕೊಡುತ್ತದೆ ಸಾರ್!

ಗುಂಡನ ಹೆಂಡತಿ ತನ್ನ ಗೆಳತಿಗೆ ಫೋನ್ ಮಾಡಿ, 'ಇವತ್ತು ನಮ್ಮನೇಲಿ ಮಧ್ಯಾಹ್ನದ ಊಟಕ್ಕೆ ಬಿಸಿ ಬೇಳೆ ಬಾತ್, ಗಸಗಸೆ ಪಾಯಸ, ಆಂಬೊಡೆ, ಮೊಸರು ಬಜ್ಜಿ, ಅನ್ನ ಸಾಂಬಾರ್, ಕೋಸಂಬರಿ, ಹಪ್ಪಳ, ಸಂಡಿಗೆ ಕೊರೊನಾ ಸ್ಪೆಷಲ್ ಕಣೆ' ಎಂದಳು.
ಅದನ್ನು ಕೇಳಿಸಿಕೊಂಡ ಗುಂಡ, 'ನೋಡೊ, ಮಾಡಿರುವುದು ಬರೀ ಅನ್ನ ಸಾಂಬಾರು. ಮದ್ವೆ ಮನೆ ಊಟದ ರೇಂಜ್‌ನಲ್ಲಿ ಸುಳ್ಳು ಹೇಳ್ತಾ ಇದ್ದಾಳೆ. 'ಇರ್ಲಿ ಬಿಡಪ್ಪ. ಆ ಆಂಟಿ ನಿನ್ನೆ ಪಲಾವ್, ಮೊಸರು ಬಜ್ಜಿ, ಬೋಂಡಾ, ಹೆಸರು ಬೇಳೆ ಪಾಯಸ, ಅಂತ ಏನೇನೋ ಹೇಳುತಿದ್ರು. ಅದಕ್ಕೆ ಇವತ್ತು ಅಮ್ಮ ಅವರ ಬಾಯಲ್ಲಿ ನೀರು ಬರಿಸಲು ಹೀಗೆ ಹೇಳಿದ್ದಾಳೆ' ಎಂದ ಮಗ. 'ಅದರಲ್ಲಿ ಏನೋ ದೊಡ್ಡಸ್ತಿಕೆ ಬಂತು' ಎಂದ ಗುಂಡ. ಅದಕ್ಕೆ ಅಯ್ಯೋ ಅಪ್ಪಾ ಆ ಆಂಟಿ ಮಗ ನನ್ನ ಕ್ಲಾಸ್‌ಮೆಟ್. ಆಂಟಿ ಫೋನ್ ಇಟ್ಟ ತಕ್ಷಣ ಅಮ್ಮ, ಅವನನ್ನು ಕೇಳು ಅಂದ್ಲು. ಅವನನ್ನು ಕೇಳಿದ್ದಕ್ಕೆ ಬರೀ ಚಿತ್ರಾನ್ನ ಅಂದಿದ್ದ' ಎಂದ. ಗುಂಡ ಸುಮ್ಮನಾದ.

ಮಾವ: ಅಳಿಯಂದಿರೇ, ನೀವು ಯುಗಾದಿ ಹಬ್ಬಕ್ಕೆ ನಾಲ್ಕು ದಿನ ಮೊದಲೇ ಬಂದಿದ್ದು ಒಳ್ಳೆಯದಾಯ್ತು.
ಅಳಿಯ: ಹೌದು ಮಾವ, ತಡ ಮಾಡಿದ್ದರೆ ರೈಲು, ಬಸ್ಸು ಯಾವುದೂ ಇರುತ್ತಿರಲಿಲ್ಲ.
ಮಾವ: ಹಾಗಲ್ಲ ಅಳಿಯಂದಿರೇ, ಈಗ ಕೊರೊನಾ ಅಂತ ಕೆಲಸದವಳೂ ಬರುತ್ತಿಲ್ಲ. ನಾವಿಬ್ಬರೂ ಹಂಚಿಕೊಂಡು ಮನೆಗೆಲಸ ಮಾಡಿದರಾಯ್ತು ಅಂತ.

ನ್ಯಾಯಾಧೀಶ: ಕೊಲೆ ನಡೆದಿದ್ದನ್ನು ನೋಡಿದರೂ ನೀನು ಯಾಕೆ ಅದನ್ನು ತಡೆಯಲು ಪ್ರಯತ್ನಿಸಲಿಲ್ಲ.
ರಂಗ: ಮಹಾಸ್ವಾಮಿ, ಒಂದು ವೇಳೆ ನಾನು ಆ ಕೊಲೆಯನ್ನು ತಡೆಯಲು ಮುಂದಾಗಿದ್ದರೆ ನಿಮ್ಮ ಮುಂದೆ ಸಾಕ್ಷಿ ಹೇಳಲು ಯಾರೂ ಇರುತ್ತಿರಲಿಲ್ಲ. ಅದಕ್ಕೆ ತಡೆಯಲಿಲ್ಲ.

ಪತ್ನಿ: ರೀ ಕೊರೊನಾ ಇರುವುದರಿಂದ ಒಂದು ದಿನದ ಸಂಬಳವನ್ನು ಮುಖ್ಯಮಂತ್ರಿಗಳ ನಿಧಿಗೆ ಹಿಡಿಯುತ್ತಾರಂತೆ.
ಪತಿ: ಒಂದು ದಿನದ ಬದಲು ಒಂದು ತಿಂಗಳ ಸಂಬಳ ಹಿಡಿದುಕೊಳ್ಳಲಿ. ಆದರೆ ಆಫೀಸಿಗೆ ಹೋಗೋದಿಕ್ಕೆ ಅನುಮತಿ ಕೊಡಲಿ!

ಸಂಗ್ರಹ: ಮನೋಜ್ ಆರ್.
ಕೋಲಾರ

ನಿರಂತರ ಸದೃಢ ಆರೋಗ್ಯಕ್ಕಾಗಿ
SDM™ AYURVEDA PHARMACY
ಅಷ್ಟವರ್ಗಯುಕ್ತ
ಚ್ಯವನಪ್ರಾಶ
ಲೇಹ


ಹಸಿ ನೆಲ್ಲಿಕಾಯಿ ಯಿಂದಲೇ ತಯಾರಿಸಿದೆ.
ರೋಗ ನಿರೋಧಕ ಶಕ್ತಿ ಹೆಚ್ಚಿಸಲು
ವೃದ್ಧಾಪ್ಯದ ಆರೋಗ್ಯ ಸಮಸ್ಯೆ
ಮಕ್ಕಳ ಬೆಳವಣಿಗೆ
ಆಯುಷ್ ಕ್ವಾಥ
ಮನೆಯಲ್ಲಿ ಇರಲೇಬೇಕಾದ ಆಯ್ದ ಮೂಲಿಕೆಗಳ ಕಷಾಯ
ಶೀತ, ನೆಗಡಿ, ಗಂಟಲು ಹಾಗೂ ಕಫ ಬಾಧೆ.
ಶರೀರದ ಚಯಾಪಚಯ ಪ್ರಕ್ರಿಯೆ ಸುಧಾರಣೆ.
ಎಲ್ಲಾ ವಯಸ್ಸಿನವರಿಗೆ ಉಪಯುಕ್ತ.


ತಯಾರಕರು
SDM
ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಆಯುರ್ವೇದ ಫಾರ್ಮಸಿ
ಕುತ್ಪಾಡಿ – 574 118, ಉಡುಪಿ ಜಿಲ್ಲೆ, ಕರ್ನಾಟಕ
ISO 9001:2015 & GMP CERTIFIED
Email: sdmaph@sdmayurvedacollegeudupi.in
Customer Care: +91 8970977513
ಇದು 'SDM ಆಯುರ್ವೇದ ಫಾರ್ಮಸಿ'ಯ ಉತ್ಕೃಷ್ಟ ಗುಣಮಟ್ಟದ ಉತ್ಪನ್ನ.